ಕರ್ನಾಟಕ ಸರ್ಕಾರ

**ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-1**

ಸಂಖ್ಯೆ : ಸಿ7(8)/ಆರ್.ಟಿ.ಇ./ಶುಮ/ತಂ.ಬಿಡು/2020-21 ದಿನಾಂಕ 01.02.2022

# ಸುತ್ತೋಲೆ

ವಿಷಯ : 2020-21ನೇ ಸಾಲಿನ ಆರ್.ಟಿ.ಇ. ಶುಲ್ಕ ಮರುಪಾವತಿ ವ್ಯತ್ಯಾಸದ ಮೊತ್ತಕ್ಕೆ ಮರು ಪ್ರಸ್ತಾವನೆ (ಅಪೀಲು) ಸಲ್ಲಿಸಲು ತಂತ್ರಾಂಶ ಬಿಡುಗಡೆ ಮಾಡಿರುವ ಬಗ್ಗೆ.

ಉಲ್ಲೇಖ : 1. ಈ ಕಚೇರಿ ಸುತ್ತೋಲೆ ಸಮ ಸಂಖ್ಯೆ ದಿನಾಂಕ : 02.01.2021

2. ಈ ಕಚೇರಿ ಸುತ್ತೋಲೆ ಸಮ ಸಂಖ್ಯೆ ದಿನಾಂಕ : 04.10.2021

*****

ಶಿಕ್ಷಣ ಹಕ್ಕು ಕಾಯ್ದೆ ಸೆಕ್ಷನ್ 12(1)(ಸಿ) ಅಡಿ ಪ್ರವೇಶ ಪಡೆದ ವಿದ್ಯಾರ್ಥಿಗಳ 2020-21ನೇ ಸಾಲಿನ ಶುಲ್ಕ ಮರುಪಾವತಿಯ ಎರಡೂ ಕಂತುಗಳ ಮೊತ್ತವನ್ನು ಪಡೆದು, ಶಾಲಾ ಹಂತದಲ್ಲಿ ಕ್ಲೈಂ ಮಾಡಿರುವ ಮೊತ್ತವು ಕೆಲವು ಕಾರಣಗಳಿಂದ ಅಂದರೆ ಆರ್.ಟಿ.ಇ. ವಿದ್ಯಾರ್ಥಿಗಳ ಸಂಖ್ಯೆಯಲ್ಲಿನ ವ್ಯತ್ಯಯ, ಶಾಲಾ ಖರ್ಚು ವೆಚ್ಚಗಳು ಅಥವಾ ಇವೆರಡೂ ಸೇರಿ ವ್ಯತ್ಯಯವಾಗಿರುವಂತಹ ಬಾದಿತ ಶಾಲೆಗಳಿಗೆ ವ್ಯತ್ಯಾಸದ ಮೊತ್ತಕ್ಕೆ ಮರುಪ್ರಸ್ತಾವನೆ ಸಲ್ಲಿಸಲು ತಂತ್ರಾಂಶವನ್ನು ದಿನಾಂಕ : 04.10.2021 ರಿಂದ 25.10.2021ರ ವರೆಗೆ ಉಲ್ಲೇಖ (2) ರೀತ್ಯ ಬಿಡುಗಡೆ ಮಾಡಲಾಗಿತ್ತು.

ಈಗಲೂ ಕೆಲವು ಶಾಲೆಗಳಿಂದ 2020-21ರ ಆರ್.ಟಿ.ಇ. ಶುಲ್ಕ ಮರುಪಾವತಿಯ ವ್ಯತ್ಯಾಸದ ಮೊತ್ತಕ್ಕೆ ಮರುಪ್ರಸ್ತಾವನೆ ಸಲ್ಲಿಸಲು ಅನುಮತಿ ನೀಡುವಂತೆ ಕೋರಿ ಈ ಕಚೇರಿಗೆ ಮನವಿಗಳು ಸ್ವೀಕೃತವಾಗುತ್ತಿವೆ. ಈ ನಿಟ್ಟಿನಲ್ಲಿ 2020-21ರ ಮರುಪ್ರಸ್ತಾವನೆ (ಅಪೀಲು) ತಂತ್ರಾಂಶವನ್ನು ಮತ್ತೊಮ್ಮೆ 01.02.2022 ರಿಂದ 15.02.2022ರವರೆಗೆ ಬಿಡುಗಡೆ ಮಾಡಿದೆ. ಮರುಪ್ರಸ್ತಾವನೆ ಸಲ್ಲಿಸಲು ಅನುಸರಿಸಬೇಕಾದ ಕ್ರಮಗಳ ಬಗ್ಗೆ ಉಲ್ಲೇಖ (2)ರ ಸುತ್ತೋಲೆಯಲ್ಲಿದ್ದು ಪಾಲಿಸಲು ಸೂಚಿಸಿದೆ.

[ಮಾನ್ಯ ಆಯುಕ್ತರ ಆದೇಶದ ಮೇರೆಗೆ]

ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)

**ಇವರಿಗೆ,**

1. ರಾಜ್ಯದ ಎಲ್ಲಾ ಜಿಲ್ಲೆಗಳ ಉಪ ನಿರ್ದೇಶಕರು (ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ ಇವರಿಗೆ ಸೂಕ್ತ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ವಲಯ/ತಾಲ್ಲೂಕುಗಳ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ
3. ಹಿರಿಯ ಸಹಾಯಕ ನಿರ್ದೇಶಕರು/ಸಹಾಯಕ ನಿರ್ದೇಶಕರು, ಇ-ಆಡಳಿತ ವಿಭಾಗ, ಆಯುಕ್ತರ ಕಚೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ತಂತ್ರಾಂಶ ಬಿಡುಗಡೆ ಸಂಬಂಧ ಸೂಕ್ತ ಕ್ರಮಕ್ಕಾಗಿ.
4. ಹಿರಿಯ ಕಾರ್ಯಕ್ರಮಾಧಿಕಾರಿಗಳು, ಎಸ್ಎಟಿಎಸ್ ವಿಭಾಗ, ರಾಜ್ಯ ಯೋಜನಾ ನಿರ್ದೇಶಕರ ಕಚೇರಿ, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು ಇವರಿಗೆ ಕ್ರಮಕ್ಕಾಗಿ.
5. ಸಂಬಂಧಿಸಿದ ಎಲ್ಲಾ ಅನುದಾನರಹಿತ ಶಾಲೆಗಳ ಮುಖ್ಯಸ್ಥರು/ಕಾರ್ಯದರ್ಶಿಗಳಿಗೆ ಕ್ರಮಕ್ಕಾಗಿ.

**ಪ್ರತಿ :**

1. ಮಾನ್ಯ ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ/ಧಾರವಾಡ ರವರಿಗೆ ಗೌರವಗಳೊಂದಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಕಚೇರಿ ಪ್ರತಿ.